ಮಾಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಬೇಕಾದರೆ ಅವರು ವಿಧೇಯಕವನ್ನು ಮಂಡಿಸಲಿ. ನಾಳೆ ಅಧ್ಯಯನ ಮಾಡಿಕೊಂಡು ಬಂದು ವಿಧೇಯಕಗಳ ಮೇಲೆ ಚರ್ಚಿಸುತ್ತೇವೆ.

ಅಧ್ಯಕ್ಷರು: ಒಂದೆರಡು ಚಿಕ್ಕ ವಿಧೇಯಕಗಳಿವೆ.

ಶ್ರೀ ಹೆಚ್.ಡಿ. ರೇವಣ್ಣ: ಒಂದೇ ದಿವಸದಲ್ಲಿ ಇಷ್ಟೂ ಬಿಲ್‌ಗಳನ್ನೂ ತೆಗೆದುಕೊಂಡರೆ ನಾವು ಹೇಗೆ ಚರ್ಚಿಸುವುದಕ್ಕಗುತ್ತದೆ? ಯಾರನ್ನು ಕೇಳುವುದಕ್ಕಾಗುತ್ತದೆ? ನಮಗೆ ಬಿಲ್‌ನ ಪ್ರತಿಯನ್ನೂ ಕೊಡುವುದಿಲ್ಲ. ಅರ್ಧ ಗಂಟೆಯಲ್ಲಿ ಚರ್ಚೆ ಮಾಡಿ ಪಾಸ್ ಮಾಡಿಕೊಡಿ ಎಂದರೆ ಹೇಗಾಗುತ್ತದೆ? ಇವತ್ತು ಬೇಕಿದ್ದರೆ ವಿಧೇಯಕಗಳನ್ನು ಮಂಡಿಸಲಿ, ಅದರ ಪ್ರತಿಗಳನ್ನು ಕೊಡಲಿ, ನಾಳೆ ಅವುಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು: Very small Bills ಇವೆ. ಈ ರೀತಿಯಾಗುವುದಾದರೆ, ನಾಳೆಯಿಂದ ಕಟ್ಟುನಿಟ್ಟಾಗಿ ಚರ್ಚಿಸುವ ಯಾವುದೇ ವಿಷಯಗಳಿದ್ದರೂ ಸಂಜೆ 5.00 ಗಂಟೆಗೆ ಮುಗಿಸಿ, ತದನಂತರ, ಬಿಲ್‌ಗಳನ್ನು ತೆಗೆದುಕೊಳ್ಳುತ್ತೇನೆ. ನಿಯಮ 69ರಡಿ ಚರ್ಚೆಯಾದ ಬಳಿಕ, ಬಿಲ್‌ಗಳ ಮೇಲೆ ಚರ್ಚಿಸಲು ಕುಳಿತುಕೊಳ್ಳೋಣವೆಂದು ಹೇಳಿದಿರಿ. ಅನಂತರ, ಶೂನ್ಯ ವೇಳೆ ಎಂದು ತಿಳಿಸಿದಿರಿ.

ಶ್ರೀ ಹೆಚ್.ಡಿ. ರೇವಣ್ಣ: ನೀವು ಹೇಳಿದ್ದಕ್ಕೆಲ್ಲಾ ನಾವು ಒಪ್ಪಿದ್ದೇವಲ್ಲ ಸರ್.

ಅಧ್ಯಕ್ಷರು: ನಾಳೆಯಿಂದ ಎಲ್ಲಾ ವಿಷಯಗಳನ್ನು ಸಂಜೆ 5.00 ಗಂಟೆಗೆ ಮುಕ್ತಾಯಗೊಳಿಸಿ, 5.00 ಗಂಟೆ ಬಳಿಕ ಬಿಲ್‌ಗಳ ಮೇಲೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ನೀವು ನಿಯಮ ಮಾಡುವುದಾದರೆ, ನಾನೂ ನಿಯಮ ಮಾಡುತ್ತೇನೆ.

7. ಶಾಸನ ರಚನೆ

1) ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, 2009 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 2009ರ ಸಾಲಿನ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಎಸ್. ಸುರೇಶ್‌ಕುಮಾರ್: ಸನ್ಮಾನ್ಯ ಸಭಾಧ್ಯಕ್ಷರೆ, ರಾಷ್ಟ್ರೀಯ ನ್ಯಾಯಾಂಗ ವೇತನ ಆಯೋಗ ಏನಿದೆ, ಅದು ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ, "Civil Judge Junior Division" ಎಂದು ಇರುವುದನ್ನು ಬದಲಾಯಿಸಿ "Civil Judge" ಎಂದು ಮಾಡುತ್ತಾರೆ. "Civil Judge Senior Division" ಎಂದು ಇರುವುದನ್ನು "Senior Civil Judge" ಎಂದು ಮಾಡುತ್ತಾರೆ. It is according to the National Judicial Pay Commission. ಆ ರೀತಿ ಮಾಡಿದ್ದಾರೆ. ಆದಾದ ನಂತರ, ನೀವು ಇದನ್ನು adopt ಮಾಡಬೇಕೆಂದು ಒಂದು reported ಸಹ ಇದೆ. ಇದರಿಂದ ಸರ್ಕಾರದ ಮೇಲೆ ಯಾವುದೇ ರೀತಿಯ financial burden ಆಗುವುದಿಲ್ಲ.

Sri Siddaramaiah: If the recommendations apply to all the States and Union Territories, ಇದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ, ಅಂಗೀಕರಿಸಬಹುದು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"2009ರ ಸಾಲಿನ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು: ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೆಯಕಕ್ಕೆ ಸೇರಿಸಲಾಯಿತು)

ಖಂಡ 1, ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೋದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 2009ರ ಸಾಲಿನ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"2009ರ ಸಾಲಿನ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

2. ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕ, 2009

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಏನೆಂದರೆ 2009ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಅವರು ಕೇವಲ ಮಂಡಿಸಲು ಅನುಮತಿ ಕೇಳಿದ್ದಾರೆ. ಆದರೆ, ನಾವು ಅದನ್ನು ಅನುಮೋದನೆಯೇ ಮಾಡಿಕೊಟ್ಟು ಬಿಡುತ್ತೇವೆ. ಅವರು ಯಾವ ಕಾರಣಕ್ಕಾಗಿ ಇದನ್ನು ತಂದಿದ್ದಾರೆ ಎಂಬುದರ ಬಗ್ಗೆ ವಿವರಣೆಯನ್ನು ಕೊಡಲಿ. ನಾವು ಒಪ್ಪಿಕೊಂಡು ಬಿಡುತ್ತೇವೆ.